30. ಬಸವೇಶ್ವರ ವಿದ್ಯಾವರ್ಧಕ ಸಂಘದ ಕಾನೂನು ಕಾಲೇಜು , ಬಾಗಲಕೊಟೆ
31. ಬಿವಿ ಬೆಲ್ಲದ ಕಾನೂನು ಕಾಲೇಜು, ಬೆಳಗಾಂ-590001
32. ಕೆಎಲ್ಇ ಸಂಜೆ ಕಾನೂನು ಕಾಲೇಜು, ಬೆಳಗಾಂ.
33. ಕೆಆರ್ಇಎಸ್ ಕಾನೂನು ಕಾಲೇಜು, ಬೀದರ್-585401
34. ಎಸ್ಸಿಬಿ ಕಾನೂನು ಕಾಲೇಜು, ರಾಯಚೂರು-584101
35. ವುಂಕಿಸಣ್ಣ ರುದ್ದಪ್ಪ ಕಾನೂನು ಕಾಲೇಜು, ಬಳ್ಳಾರಿ.

ವಿಷಯ: ಬೈಲಹೊಂಗಲ ಕ್ಷೇತ್ರದ ಕೆಲವು ಹಳ್ಳಿಗಳಿಗೆ ವಿದ್ಯುತ್ ಸೌಕರ್ಯ ಒದಗಿಸುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1545 (2228)

ಶ್ರೀ ಶಿವಾನಂದ. ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ರುದ್ರಾಪುರ ಮತ್ತು ತಾಂಡಾ ಹಾಗೂ ಬೈಲಹೊಂಗಲ ತಾಲ್ಲೂಕು ಲಿಂಗದಹಳ್ಳಿ ಗ್ರಾಮಗಳಿಗೆ ವಿದ್ಯುತ್ ಸೌಕರ್ಯ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ ಈ ಗ್ರಾಮಕ್ಕೆ ವಿದ್ಯುತ್ ಸೌಕರ್ಯ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ.

ಇ ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರು ವಾಸಿಸುತ್ತಿದ್ದು ಇದುವರೆವಿಗೂ ವಿದ್ಯುತ್ ಸೌಕರ್ಯ ಒದಗಿಸದಿರಲು ಕಾರಣವೇನು?

ಶ್ರೀ ಎಂ. ರಾಮಪ್ಪ,(ಇಂಧನ ರಾಜ್ಯ ಮಂತ್ರಿಗಳು)

ಅ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ರುದ್ರಾಪುರವನ್ನು ವಿದ್ಯದೀಕರಿಸಲಾಗಿದೆ. ಈ ಗ್ರಾಮಕ್ಕೆ ಸೇರಿರುವ ತಾಂಡಾವನ್ನು ವಿದ್ಯುದೀಕರಿಸಬೇಕಾಗಿದೆ. ಬೈಲಹೊಂಗಲ ತಾಲ್ಲೂಕಿನ ಲಿಂಗದಹಳ್ಳಿಯನ್ನು ಈ ಮುಂಚೆಯೇ ವಿದ್ಯುದೀಕರಿಸಲಾಗಿತ್ತು. ಆದರೆ ನಂತರ ಸದರೀ ಗ್ರಾಮವು ಪುನರ್ವಸತಿ ಗೊಂಡಿರುವುದರಿಂದ ಪುನರ್ ವಿದ್ಯುದೀಕರಣವಾಗಬೇಕಾಗಿದೆ.

ಆ ರುದ್ರಾಪುರ ಗ್ರಾಮಕ್ಕೆ ಸೇರಿದ ತಾಂಡಾವನ್ನು ವಿದ್ಯುದೀಕರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಲಿಂಗದಹಳ್ಳಿ ಗ್ರಾಮವನ್ನು ವಿದ್ಯದೀಕರಿಸಲು ನೀರಾವರಿ ಇಲಾಖೆಯು ವಿದ್ಯುದೀಕರಣದ ವೆಚ್ಚವನ್ನು ನೀಡಬೇಕಾಗಿದೆ.

ಇ ಈ ಮುಂಚೆ ರುದ್ರಾಪುರ ತಾಂಡಾಕ್ಕೆ ವಿದ್ಯುತ್ ಒದಗಿಸಲು ಸುಮಾರು ೨ ಲಕ್ಷಕ್ಕೂ ಹೆಚ್ಚಿನ ವೆಚ್ಚ ಮಾಡಬೇಕಾಗಿತ್ತು. ಆದ್ದರಿಂದ ವಿದ್ಯುದೀಕರಣವು ವಿಳಂಬವಾಯಿತು. ಈಗ ಇಲ್ಲಿ ಎರಡು ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿರುವುದರಿಂದ, ಸದರಿ ತಾಂಡಾದ ವಿದ್ಯುದೀಕರಣಕ್ಕೆ ತಗಲುವ ವೆಚ್ಚ ಕಡಿಮೆಯಾಗಿರುವುದರಿಂದ, ವಿದ್ಯುದೀಕರಣಕ್ಕಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಲಿಂಗದಹಳ್ಳಿ ಪುನರ್ವಸತಿ ಕೇಂದ್ರದ ವಿದ್ಯುದೀಕರಣಕ್ಕೆ ಸಂಬಂಧಿಸಿದ ನೀರಾವರಿ ಇಲಾಖೆಯವರು ತಗಲುವ ವೆಚ್ಚವನ್ನು ನೀಡದೇ ಇರುವುದರಿಂದ, ವಿದ್ಯುದೀಕರಣಕ್ಕೆ ಕ್ರಮ ಕೈಗೊಳ್ಳಲಾಗಿಲ್ಲ.

ವಿಷಯ: ಬೆಳಗಾವಿ ಜಿಲ್ಲೆಯಲ್ಲಿ ಬಸ್ ಸೌಕರ್ಯ ಒದಗಿಸುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1546 (2229)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ರುದ್ರಾಪುರ ತಾಂಡಾ, ಹೂಲಿಕೇರಿ, ತಾಂಡಾ ಮತ್ತು ಹಲಕಿ ತಾಂಡಾಗಳಿಗೆ ಬಸ್ ಸೌಕರ್ಯ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ ಈ ಗ್ರಾಮಗಳಿಗೆ ಬಸ್ ಸೌಕರ್ಯ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ ಈಗ್ರಾಮಗಳಲ್ಲಿ ನೂರಕ್ಕೆ ಸೂರರಷ್ಟು ಪರಿಶಿಷ್ಟ ಜಾತಿಗೆ ಸೇರಿದ ಜನರು ವಾಸಿಸುತ್ತಿದ್ದು ಇದುವರೆವಿಗೂ ಸಹ ಬಸ್ ಸೌಕರ್ಯ ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ಹಾಗಿದ್ದಲ್ಲಿ ಇನ್ನು ಮುಂದೆಯಾದರೂ ತತ್‌ಕ್ಷಣ ಬಸ್ ಸೌಲಭ್ಯವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಅಜೀಜ್ ಸೇಠ್, (ಸಾರಿಗೆ ಸಚಿವರು)

ಅ ಬಂದಿದೆ.

ಆ ಈ ಕಾಂಡಾಗಳಿಗೆ ಈಗ ಮೋಟಾರು ವಾಹನ ಸಂಚಾರ ಯೋಗ್ಯ ರಸ್ತೆಗಳಿಲ್ಲ. ರಸ್ತೆಗಳು ನಿರ್ಮಾಣವಾದ ಕೂಡಲೇ ಬಸ್ಸುಗಳನ್ನು ಪ್ರಾರಂಭಿಸಲಾಗುವುದು.

ಇ ಬಂದಿಲ್ಲ.

ಈ ಈ ಗ್ರಾಮಗಳಿಗೆ ಮೋಟಾರು ವಾಹನ ಸಂಚಾರ ಯೋಗ್ಯ ಸಂಪರ್ಕ ರಸ್ತೆಗಳಿಲ್ಲ. ಸ್ಥಳೀಯ ಸಂಸ್ಥೆಗಳಿಂದ ಈ ಗ್ರಾಮಗಳಿಗೆ ರಸ್ತೆಗಳ ನಿರ್ಮಾಣವಾದ ನಂತರ ವಿಷಯವನ್ನು ಪರಿಶೀಲಿಸಲಾಗುವುದು.

ವಿಷಯ: ಉಡುಪಿ ತಾಲ್ಲೂಕು ಬ್ರಹ್ಮಾವರದಲ್ಲಿನ ಸರ್ಕಾರಿ ಪ್ರೌಢಶಾಲೆಗೆ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ನೀಡುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1547 (2278)

ಶ್ರೀ ಪಿ.ಬಸವರಾಜ್ (ಬ್ರಹ್ಮಾವರ್):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಉಡುಪಿ ತಾಲ್ಲೂಕು ಬ್ರಹ್ಮಾವರ ಸರ್ಕಾರಿ ಪ್ರೌಢಶಾಲೆ ಯಾವ ವರ್ಷದಿಂದ ಪ್ರಾರಂಭವಾಗಿದೆ, ಎಸ್.ಎಸ್.ಎಲ್.ಸಿ ಮೊದಲ ಪಂಗಡ ಯಾವ ವರ್ಷಜಾರಿಗೆ ಬಂದಿದೆ.

ಆ ಈ ಪ್ರೌಢಶಾಲೆಗೆ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂಧಿಯನ್ನು ನೀಡಲಾಗಿದೆಯೇ, ನೀಡಿದ್ದಲ್ಲಿ ವಿವರ ನೀಡುವುದು.

ಇ ಸದರಿ ಶಿಕ್ಷಣ ಇಲಾಖೆಯಲ್ಲಿ ಹಲವಾರು ಶಿಕ್ಷಕರು ಉಚಿತ ಸೇವೆ ನೀಡುತ್ತಿರುವುದು ಇಲಾಖಾ ಗಮನಕ್ಕೆ ಬಂದಿದೆಯೇ? ಅಸಮರ್ಪಕ ಬೋಧನಾ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ಸಮರ್ಪಕವಾಗಿಯೂ, ಪರಿಣಾಮಕಾರಿಯಾಗಿಯೂ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ಹಾಗಾದರೆ ಯಾವಾಗ ಈ ಪ್ರೌಢಶಾಲೆಗೆ ಖಾಯಂ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಒದಗಿಸಲಾಗುವುದು.

ಶ್ರೀ ಎಂ.ವೀರಪ್ಪ ಮೊಯಿಲಿ, (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ ಬ್ರಹ್ಮಾವರದಲ್ಲಿ 1988ರಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ಪ್ರಾರಂಭಿಸಿದ್ದು, 1990-91ರಲ್ಲಿ ಎಸ್.ಎಸ್.ಎಲ್.ಸಿ.ಪರೀಕ್ಷೆಗೆ ಮೊದಲ ತಂಡದ ವಿದ್ಯಾರ್ಥಿಗಳನ್ನು ಸಾದರ ಪಡಿಸಲಾಗಿದೆ.

ಆ ಖಾಯಂ ಸಿಬ್ಬಂದಿಯನ್ನು ನೇಮಿಸಲಾಗಿಲ್ಲ. ಅಗತ್ಯ ಸಿಬ್ಬಂಧಿಯನ್ನು ನಿಯೋಜನೆ ಮೇರೆಗೆ ಒದಗಿಸಲಾಗಿದೆ.

ಇ ಸದರಿ ಶಾಲೆಯಲ್ಲಿ ಉಚಿತವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ವಿಷಯವು ಸರ್ಕಾರದ ಗಮನಕ್ಕೆ